**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

**ಸಂಖ್ಯೆ:ಸಿ4(2):ಪ್ರೌ.ಶಿ.:ಜೇಷ್ಠತೆ:12/2010-11** **ದಿನಾಂಕ:29-08-2012**

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯಲ್ಲಿ ಬಿಟ್ಟು ಹೋಗಿರುವ / ತಿದ್ದುಪಡಿ ಆಗಬೇಕಾಗಿರುವ ಪ್ರಕರಣಗಳ ಕುರಿತು.

ಉಲ್ಲೇಖ: 1) ಈ ಕಛೇರಿಯ ಅ.ಸ.ಪ.ಸಂಖ್ಯೆ:ಸಿ4(2) ಪ್ರೌ.ಶಿ.ಜೇ.ಪಟ್ಟಿ/2010-11 ದಿ:15-04-11

2) ಈ ಕಛೇರಿಯ ಅ.ಸ.ಪ. ಸಂಖ್ಯೆ:ಸಿ4(2):ಪ್ರೌ.ಶಿ.ಜೇ.ಪಟ್ಟಿ12/2010-11 ದಿ:21-05-12

3) ಈ ಕಛೇರಿಯ ಸಮ ಸಂಖ್ಯೆ ಜ್ಞಾಪನ ದಿನಾಂಕ:22-02-12.

4) ಶಿಕ್ಷಕರಿಂದ ಆಕ್ಷೇಪಣೆ ಆಹ್ವಾನಿಸಿದ ಪತ್ರಿಕಾ ಪ್ರಕಟಣೆ ದಿ:27-02-12

5) ಶಿಕ್ಷಕರು ಮತ್ತು ಉಪನಿರ್ದೇಶಕರ ಮನವಿಗಳು

****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಸರ್ಕಾರಿ ಪ್ರೌಢಶಾಲಾ ಗ್ರೇಡ್-2 ಸಹ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ:31-12-2007 ರಲ್ಲಿದ್ದಂತೆ ಅಂತಿಮಗೊಳಿಸಿ ಈಗಾಗಲೇ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಈ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಮುನ್ನಾ ತಾತ್ಕಾಲಿಕ ಜೇಷ್ಠಾತಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಆಯಾ ವ್ಯಾಪ್ತಿಯ ಸರ್ಕಾರಿ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಿಗೆ ಜ್ಞಾಪನ ನೀಡಿ ಬಾಧಿತ ಶಿಕ್ಷಕರು ಅಂದರೆ ಜೇಷ್ಠತಾ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಅಥವಾ ತಿದ್ದುಪಡಿ ಆಗಬೇಕಾಗಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಆಕ್ಷೇಪಣೆಯನ್ನು ಶಿಕ್ಷಕರಿಂದ ಪಡೆದು ಆಯಾ ವ್ಯಾಪ್ತಿಯ ಉಪನಿರ್ದೇಶಕರು ಈ ಆಕ್ಷೇಪಣೆಗಳನ್ನು ಅವರ ಸೇವಾ ಪುಸ್ತಕದ ವಿವರಗಳೊಂದಿಗೆ ಪರಿಶೀಲಿಸಿ ಸಲ್ಲಿಸುವಂತೆ ಉಲ್ಲೇಖಿತ ಪತ್ರಗಳಲ್ಲಿ ಹಲವಾರು ಬಾರಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಈ ರೀತಿ ಎಲ್ಲಾ ವಿಧದಲ್ಲಿ ಕ್ರಮವಹಿಸಲಾಗಿದ್ದರೂ ಸಹ ಈಗಲೂ ಈ ಕಛೇರಿಗೆ ನೇರವಾಗಿ ಶಿಕ್ಷಕರಿಂದ ಹಾಗೂ ಉಪನಿರ್ದೇಶಕರಿಂದ ಜೇಷ್ಠತಾ ಪಟ್ಟಿಯಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಪ್ರಸ್ತಾವನೆಗಳು ಬರುತ್ತಿರುವುದು ಗಮನಿಸಲಾಗಿದೆ. ಜೇಷ್ಠತಾ ಪಟ್ಟಿಯಲ್ಲಿ ಪದೇ ಪದೇ ಉಪಸಂಖ್ಯೆ ನೀಡುವುದು, ತಿದ್ದುಪಡಿ ಮಾಡುವುದು ಉತ್ತಮ ಸಂಪ್ರದಾಯವಾಗಿರುವುದಿಲ್ಲ. ಇದಲ್ಲದೆ ಜೇಷ್ಠತಾ ಪಟ್ಟಿಯಲ್ಲಿನ ತಿದ್ದುಪಡಿಗಾಗಿ ಶಿಕ್ಷಕರು ನೇರವಾಗಿ ಈ ಕಛೇರಿಗೆ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸುತ್ತಿದ್ದು, ಈ ಶಿಕ್ಷಕರ ಸೇವಾ ವಿವರಗಳು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಅನುಮೋಧನೆ ಮಾಡದೇ ಇರುವ ಕಾರಣ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಆಯಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಮುಖ್ಯ ಶಿಕ್ಷಕರುಗಳಿಗೆ ಸೂಚನೆ ನೀಡಿ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸುವಂತೆ ನಿಮ್ಮ ಹಂತದಲ್ಲಿ ಸುತ್ತೋಲೆಯನ್ನು ಹೊರಡಿಸಲು ಸಹಾ ಸೂಚಿಸಿದೆ. ಎರಡನೆಯದಾಗಿ ಕೆಲವು ಪ್ರಕರಣಗಳಲ್ಲಿ ಅಧ್ಯಾಪಕರು ಅಹವಾಲು ಸಲ್ಲಿಸಿದ್ದಾಗ್ಯೂ ಅವರ ಮನವಿಗಳನ್ನು ಕಳುಹಿದೆ ಪ್ರಮಾದ ಮಾಡಲಾಗಿದೆ. ಇದು ಯಾರು ಮಾಡಬೇಕಾಗಿದೆ ಎಂದು ತಿಳಿಸುವುದು.

ಮುಂದುವರೆದು, 31-12-2012 ಕ್ಕೆ ಆಖೈರಾಗುವ ದಿನಾಂಕಕ್ಕೆ ಯಾವುದಾದರೂ ತಿದ್ದುಪಡಿಗಳು ಇದ್ದಲ್ಲಿ ಭಾಧಿತ ಶಿಕ್ಷಕರು ತಮ್ಮ ವಿವರವನ್ನು ಸಂಬಂಧಿಸಿದ ಹಿರಿಯ ಅಧಿಕಾರಿಗಳ ಮೂಲಕ ಉಪನಿರ್ದೇಶಕರಿಗೆ ಸಲ್ಲಿಸಬೇಕು. ಇವುಗಳನ್ನು ಉಪನಿರ್ದೇಶಕರು ಪರಿಶೀಲಿಸಿ ಸೂಕ್ತ ಅಡಕಗಳು ಮತ್ತು ಸ್ಪಷ್ಟ ಅಭಿಪ್ರಾಯದೊಂದಿಗೆ ದಿನಾಂಕ:10-01-2013 ರೊಳಗೆ ತಲುಪುವಂತೆ ಮಾಹಿತಿಯನ್ನು ಕಳುಹಿಸುವುದು. ಈ ಮಾಹಿತಿಯನ್ನು ಸಂಚಯಿಸಿ 31-01-2013 ರೊಳಗೆ 2012 ರ ಅಂತ್ಯದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಈ ಮಾಹಿತಿಯನ್ನು ಎಲ್ಲಾ ಕೇಡರಿನ ಶಿಕ್ಷಕರಿಗೆ ಅನ್ವಯಿಸಿದಂತೆ ಕಳುಹಿಸಲು ಸೂಚಿಸಿದೆ. ( ಸಹ ಶಿಕ್ಷಕರು, ವೃತ್ತಿ ಶಿಕ್ಷಕರು, ಚಿತ್ರಕಲೆ ಶಿಕ್ಷಕರು, ಸಂಗೀತ ಶಿಕ್ಷಕರು, ನಾಟಕ, ಇತ್ಯಾದಿ)

ನಿರ್ದೇಶಕರು (ಪ್ರೌಢಶಿಕ್ಷಣ)

**ಇವರಿಗೆ**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಕಡತ ಪ್ರತಿ.